**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.125/2020**

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜಪ್ಪ |
| ತಂದೆಯ ಹೆಸರು | : | ದೊಡ್ಡಪ್ಪ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಏನೂ ಇಲ್ಲ |
| ವಾಸ ಸ್ಥಳ | : | ಮಾದನಭಾವಿ, ನ್ಯಾಮತಿ ತಾಲ್ಲೂಕು |

ಪಿ.ಡಬ್ಲ್ಯೂ 2

ಸಿ.ಡಬ್ಲ್ಯೂ 6

ದಿ: 05-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಚಾಸಾ-1 ರವರು ನನ್ನ ತಂದೆ. ಚಾಸಾ-7 ರವರು ನನ್ನ ಚಿಕ್ಕಮ್ಮ. ಚಾಸಾ-8 ರವರು ನನ್ನ ಅಕ್ಕ. ಚಾಸಾ-9 ರಿಂದ 17 ರವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇದೆ. 1 ನೇ ಆರೋಪಿಯು ನನ್ನ ಚಿಕ್ಕಪ್ಪನ ಮಗ. 2 ನೇ ಆರೋಪಿಯು ನನ್ನ ಚಿಕ್ಕಪ್ಪ. 3 ನೇ ಆರೋಪಿಯು ನನ್ನ ಚಿಕ್ಕಮ್ಮ. 4 ನೇ ಆರೋಪಿ ನನ್ನ ಅತ್ತೆ. 2018 ನೇ ಇಸ್ವಿಯಲ್ಲಿ ನಾನು ಶಿಕಾರಿಪುರದ ಮಾರುತಿ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದೆ.

2. ಮಾದನಭಾವಿಯಲ್ಲಿ ನಮಗೆ 04 ಎಕರೆ ಜಮೀನು ಇದೆ. ನನ್ನ ತಂದೆಯವರ ಜಮೀನು 30 ವರ್ಷಗಳ ಹಿಂದೆ ನನ್ನ ಚಿಕ್ಕಪ್ಪ 2 ನೇ ಆರೋಪಿ ಕಡೆಯಿಂದ ಖರೀದಿ ಮಾಡಿದ್ದರು ಆದರೆ ಅದರ ಬಗ್ಗೆ

ರಿಜಿಸ್ಟರ್ ಆಗಿರಲಿಲ್ಲ. ಇದರ ಬಗ್ಗೆ ಊರಿನಲ್ಲಿ ಪಂಚಾಯಿತಿಗೆ ನಡೆಯಿತು. ಅಲ್ಲಿ ನಮ್ಮ ಚಿಕ್ಕಪ್ಪನಿಗೆ ಕರೆಸಿ ಜಮೀನನ್ನು ನಮ್ಮ ತಂದೆಗೆ ಮಾಡಿ ಕೊಡಬೇಕು ಅಂತ ಹೇಳಿದರು. ಆದರೆ ನಮ್ಮ ಚಿಕ್ಕಪ್ಪರವರು ಮಾಡಿಕೊಡಲಿಲ್ಲ. ಅದೇ ದ್ವೇಷದಿಂದ ಜಗಳ ಆಗುತ್ತಿತ್ತು ಮತ್ತು ಹೊಲದಲ್ಲಿ ಸಸಿಗಳನ್ನು ಕಿತ್ತು ಹಾಕುತ್ತಿದ್ದರು.

3. ದಿಃ 01-11-2018 ರಂದು ನನ್ನ ತಂದೆ ಹೊಲಕ್ಕೆ ಹೋಗಿದ್ದರು, ಮಧ್ಯಾಹ್ನ 3.00 ಗಂಟೆಗೆ ನಮ್ಮ ಚಿಕ್ಕಪ್ಪ, 1 ರಿಂದ 3 ನೇ ಆರೋಪಿತರು ನನ್ನ ತಂದೆಯ ಜೊತೆ ಗಲಾಟೆ ಮಾಡಿ, ನಮ್ಮ ಹೊಲದ ಬದುವಿನಲ್ಲಿ ಕಡ್ಡಿ ಕೊಯ್ದಿದ್ದರಿಂದ ಅದರ ಬಗ್ಗೆ ನಮ್ಮ ತಂದೆಯ ಜೊತೆ ಜಗಳ ಮಾಡಿ ನಿನ್ನನ್ನು ಸಾಯಿಸುತ್ತೇನೆ ಅಂತ ತುಂಬಾ ಬೆದರಿಕೆ ಹಾಕಿದ್ದರು ಮತ್ತು ಕೈ ಕಾಲುಗಳಿಂದ ಹಲ್ಲೆ ಮಾಡಿದ್ದರು. ಆನಂತರ ನನ್ನ ತಂದೆಯವರು ಮನೆಗೆ ಬಂದಿದ್ದರು. ನಂತರ ಊರಿನವರು ನನಗೆ ವಿಷಯ ತಿಳಿಸಿದರು. ನಾನು ರಾತ್ರಿ 9.00 ಗಂಟೆಗೆ ಊರಿಗೆ ಬಂದೆ. ನಂತರ ಅದರ ಬಗ್ಗೆ ನಾನು ನನ್ನ ತಂದೆಯನ್ನು ವಿಚಾರಿಸಿದೆ. ನನ್ನ ತಂದೆ ನಡೆದ ಘಟನೆಯ ಬಗ್ಗೆ ತಿಳಿಸಿದರು. ಆರೋಪಿತರ ಮನೆ ನಮ್ಮ ಮನೆಯ ಪಕ್ಕದಲ್ಲಿದ್ದು, ನಾನು ಅವರ ಮನೆಯ ಕಡೆ ಹೋಗಿ, ಅವರನ್ನು ಕರೆದುನಮ್ಮ ತಂದೆಗೆ ಹಲ್ಲೆ ಮಾಡಿದ ಬಗ್ಗೆ ನಾಗೇಶಪ್ಪ, ಸಂತೋಷ, ಗಿರಿಜಮ್ಮ, ದೇವರಮ್ಮರವರನ್ನು ವಿಚಾರಿಸಿದೆ. ಅವರೆಲ್ಲಾ ಗುಂಪುನಲ್ಲಿ ಬಂದು ಮೊದಲಗಿ ಕೈಯಿಂದ ನನಗೆ ಹೊಡೆದರು. ಆಗನಾನು ಜೋರಾಗಿ ಕಿರುಚಿಕೊಂಡೆ, ಅದನ್ನು ಕೇಳಿ ನನ್ನ ಅಕ್ಕ, ತಂದೆ, ಚಿಕ್ಕಮ್ಮರವರು ಹೊರಗಡೆ ಬಂದು ಜಗಳ ಬಿಡಿಸಲು ಬಂದರು. ನನ್ನತಂದೆ ಜಗಳದಿಂದ ಬಿಡಿಸುತ್ತಿರುವಾಗ 2 ನೇ ಆರೋಪಿಯು ನನ್ನ ತಂದೆಯನ್ನು ಜೋರಾಗಿ ತಳ್ಳಿದರು. ಇದರಿಂದ ನನ್ನ ತಂದೆಯವರು ಚರಂಡಿಯಲ್ಲಿ ಬಿದ್ದರು. ಗಿರಿಜಮ್ಮರವರು ಮನೆಯ ಒಳಗಡೆಯಿಂದ ಒಂದು ಚೂರಿ ತೆಗೆದುಕೊಂಡು ಬಂದು 1 ನೇ ಆರೋಪಿಯ ಕೈಗೆ ಕೊಟ್ಟು "ಅವನಿಗೆ ಮುಗಿಸು ಒಂದುಎಕರೆ ಹೊಲ ಹೋದರೂ ಪರವಾಗಿಲ್ಲ" ಅಂತ ಹೇಳಿದರು. ಅದಕ್ಕೆ 1 ನೇ ಆರೋಪಿಯು ನನ್ನನ್ನು ಸಾಯಿಸುವ ಉದ್ದೇಶದಿಂದ

ಚೂರಿಯನ್ನು ಹೊಟ್ಟೆಗೆ, ಪಕ್ಕೆಗೆ, ಬೆನ್ನಿಗೆ ಹಾಕಿದ. ಇದರಿಂದ ರಕ್ತ ಬರುತ್ತಿತ್ತು. ನಾನು ಸುಸ್ತಾಗಿ ಅಲ್ಲೆ ಕುಳಿತುಕೊಂಡಿದ್ದೆ. ಊರಿನ ಜನ ಚಾಸಾ-9 ರಿಂದ 17 ರವರು ಬಂದು ಜಗಳ ಬಿಡಿಸಲು ಬಂದರು ಅಷ್ಟರಲ್ಲಿ 1 ನೇ ಆರೋಪಿಯು ಚೂರಿ ಅಲ್ಲೇ ಬಿಟ್ಟುಓಡಿ ಹೋದರು. ಆಗ ನನಗೆ ತುಂಬಾ ಸುಸ್ತಾಗಿತ್ತು. ಹೊಟ್ಟೆ ಭಾಗ, ಎಡಭಾಗದ ರಕ್ತ ಸೋರುತ್ತಿತ್ತು. ಕೂಡಿದ ಜನ ಟವಲ್ ತೆಗೆದುಕೊಂಡು ಬಂದು ನನಗೆ ರಕ್ತ ಬರುತ್ತಿದ್ದ ಜಾಗಕ್ಕೆ ಕಟ್ಟಿದರು. ನಂತರ ಫೋನ್ ಮಾಡಿ ಆ್ಯಂಬೂಲನ್ಸ ತರಿಸಿದರು. ನಂತರ ನನ್ನನ್ನು ಹೊನ್ನಾಳಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ತುಂಬಾ ರಕ್ತ ಹೋಗಿರುವುದರಿಂದ ಗಂಭೀರವಾಗಿದ್ದು ಶಿವಮೊಗ್ಗ ಆಸ್ಪತ್ರೆಗೆ ಕರೆದುಕೊಂಡು ಹೇಗಿ ಅಂತ ಹೇಳಿದರು. ಆದ್ದರಿಂದ ನನ್ನನ್ನು ಅಲ್ಲಿಂದ ಶಿವಮೊಗ್ಗದ ನಂಜಪ್ಪ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿಯೂ ಸಹ ತುಂಬಾ ಗಂಭೀರವಾಗಿರುತ್ತದೆ ಅಂತ ಹೇಳಿದರು. ನಂತರ ನನ್ನನ್ನು ಮಣಿಪಾಲ್ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆಗ ನನಗೆ ಪ್ರಜ್ಞೆ ಹೋಯಿತು. ಮಣಿಪಾಲ್ ಆಸ್ಪತ್ರೆಯಲ್ಲಿ ನಾನು 22 ದಿನ ಚಿಕಿತ್ಸೆ ಪಡೆದುಕೊಂಡಿದ್ದೇನೆ. ಮೊದಲನೇ ದಿನ ಸಂಜೆ ಅಷ್ಟೊತ್ತಲ್ಲಿ ಮಣಿ ಪಾಲ್ ಆಸ್ಪತ್ರೆಯಲ್ಲಿ ಪ್ರಜ್ಞೆ ಬಂತು. ನನಗೆ ಆಗಿರುವಂತಹ ಗಾಯಗಳಿಗೆ ಚಿಕಿತ್ಸೆ ಪಡೆದುಕೊಂಡೆ. ಸಾಕ್ಷಿದಾರರು ತಮಗೆ ಗಾಯವಾದ ಬಗ್ಗೆ ಶರ್ಟ್ ನ್ನು ಬಿಚ್ಚಿ ತೋರಿಸಿರುತ್ತಾರೆ. ಎದೆಯಿಂದ ಕೆಳ ಭಾಗದಲ್ಲಿ ಚಿಕಿತ್ಸೆ ಆದ ಬಗ್ಗೆ ಗುರುತು ಇರುತ್ತದೆ. ನನಗೆ ಸಾಯಿಸುವ ಉದ್ದೇಶದಿಂದ ಮತ್ತು ನನಗೆ ಸಾಯಿಸಿದರೆ ಹೊಲ ಬರುತ್ತದೆ ಅಂತ ಈ ರೀತಿ ನನ್ನ ಮೇಲೆ ಹಲ್ಲೆಯಾಗಿರುತ್ತದೆ. ಚೂರಿಯಿಂದ ಚುಚ್ಚಿರುವುದರಿಂದ ಈ ರೀತಿ ನನಗೆ ಗಾಯವಾಗಿರುತ್ತದೆ.

4. ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ನಂತರ ನನ್ನ ತಂದೆ ದಿಃ 02-11-2018 ರಂದು ದೂರು ಕೊಟ್ಟಿರುತ್ತಾರೆ. 1 ನೇ ಆರೋಪಿಯು ನನ್ನನ್ನು ಕೊಲೆ ಮಾಡಲು ಬಳಸಿದ ಚೂರಿಯನ್ನು ಈಗ ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಅದನ್ನು ಮು.ಮಾ.3 ಅಂತ ಗುರುತಿಸಲಾಗಿದೆ. ಆ ಚೂರಿಯನ್ನು ಘಟನೆಯ ದಿನ ನೋಡಿದ್ದೇನೆ. ಆ ದಿನ ನಾನು ಹಳದಿ ಬಣ್ಣದ ಶರ್ಟ ಧರಿಸಿದ್ದೆ. ಆ

ಶರ್ಟನ್ನು ಈಗ ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.1 ಅಂತ ಗುರುತಿಸಲಾಗಿದೆ. ಮು.ಮಾ.1 ರಲ್ಲಿ ಒಣಗಿದ ರಕ್ತದ ಕಲೆಗಳು ನನ್ನದೇ ಇರುತ್ತದೆ. ಚೂರಿ ಹಾಕಿರುವುದರಿಂದ ನನ್ನ ಶರ್ಟ ಹರಿದಿರುತ್ತದೆ. ಆ ದಿನ ನನ್ನ ಹೊಟ್ಟೆಗೆ ಟವಲ್ ಕಟ್ಟಿದ್ದು, ಅದನ್ನು ಈಗ ನೋಡಿ ಗುರುತಿಸುತ್ತೇನೆ. ಆ ಟವಲ್ ನ್ನು ಈಗಾಗಲೇ ಮು.ಮಾ.2 ಅಂತ ಗುರುತಿಸಲಾಗಿದೆ. ಅದರಲ್ಲಿ ಸಹ ಒಣಗಿರುವ ನನ್ನ ರಕ್ತದ ಕಲೆಗಳು ಕಂಡು ಬರುತ್ತದೆ. ಸಾಕ್ಷಿದಾರರು ಮು.ಮಾ.1 ರಿಂದ 3 ನ್ನು ನೋಡಿ ಗುರುತಿಸಿರುತ್ತಾರೆ. ಆ ದಿನ ನನ್ನನ್ನು ಕೊಲ್ಲಲುಪ್ರಯತ್ನಿಸಿದ 1 ನೇ ಆರೋಪಿ ನ್ಯಾಯಾಲಯದಲ್ಲಿ ಹಾಜರಿದ್ದು, ಅವರನ್ನು ನೋಡಿ ಗುರುತಿಸುತ್ತೇನೆ. 2 ನೇ ಆರೋಪಿಯು ಈ ದಿನ ಗೈರುಹಾಜರಾಗಿದ್ದು, ಆತನನ್ನು ಗುರುತಿಸುವ ಬಗ್ಗೆ ಯಾವುದೇ ತಕರಾರು ಇಲ್ಲ ಅಂತ ಅರ್ಜಿ ಸಲ್ಲಿಸಿರುತ್ತಾರೆ. 3 ಮತ್ತು 4 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿ</u>**:

ಆರೋಪಿ ಪರ ವಕೀಲರು ಮಧ್ಯಾಹ್ನ ಪಾಟೀ ಸವಾಲು ಮಾಡುವುದಾಗಿ ಹೇಳಿದ್ದು, ಪಾಟೀ ಸವಾಲನ್ನು ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

ದಿ: 05-02-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ವಿ.ಟಿ., ವಕೀಲರಿಂದ ಆರೋಪಿತರ ಪರವಾಗಿ**:

5. ನನ್ನ ವಯಸ್ಸು 31. ನಾನು 4 ನೇ ತರಗತಿಯವರೆಗೆ ಓದಿದ್ದೇನೆ. ನನ್ನ ಸಮಕ್ಷಮದಲ್ಲಿ ನನ್ನ ತಂದೆಯವರು ಆಸ್ತಿಯನ್ನು ಖರೀದಿ ಮಾಡಿಲ್ಲ. ನನ್ನ ತಂದೆಯುವರು ಆಸ್ತಿ ಖರೀದಿ ಮಾಡಿದಾಗ ನಾನು ಒಂದು ವರ್ಷದವನು ಇದ್ದೆ. ನನ್ನ ಮತ್ತು ಆರೋಪಿತರ ನಡುವೆ ಸಣ್ಣ ಪುಟ್ಟ ಜಗಳ ನಡೆಯುತ್ತಿತ್ತು ಅಂದರೆ ನಿಜ. ಎಷ್ಟು ಪ್ರಕರಣಗಳು ನಮ್ಮ ಮತ್ತು ಆರೋಪಿತರ ನಡುವೆ ಆಗಿವೆ ಅಂತ ನನಗೆ ಗೊತ್ತಿಲ್ಲ. ನಾನು ಹೇಳಿದಂತಹ ಗಲಾಟೆ ಸುಳ್ಳು ಇರುತ್ತದೆ ಅಂದರೆ ಸರಿಯಲ್ಲ. ಗಲಾಟೆಯಾದಾಗ ಎಷ್ಟು ಜನ ಸೇರಿದ್ದರು ಅಂದರೆ 06 ಜನ ಸೇರಿದ್ದರು. ಆ 06 ಜನರ ಹೆಸರು ಅಂದರೆ ಸಂತೋಷ, ಗಿರಿಜಮ್ಮ, ಕಾಮಾಕ್ಷಿ, ನಾಗೇಶಪ್ಪ, ಮಹೇಶಪ್ಪ ಇರುತ್ತಾರೆ. ನನಗೆ ಆರೋಪಿತರು ಹೊಡೆದಾಗ ಸಣ್ಣ ಪುಟ್ಟ ಗಾಯಗಳು ಆಗಿವೆ ಅಂದರೆ ನಿಜ. ಮಣಿಪಾಲ್ ಆಸ್ಪತ್ರೆಯಲ್ಲಿ ಪೊಲೀಸರು ಬಂದು ನನ್ನ ಹೇಳಿಕೆಯನ್ನು ಪಡೆದುಕೊಂಡರು. ಘಟನೆಯಾದಾಗ ನನಗೆ ಪ್ರಜ್ಞೆ ತಪ್ಪಿಲ್ಲ. ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ನನ್ನನ್ನು ಕರೆದುಕೊಂಡು ಹೋದಾಗ ನನಗೆ ಪ್ರಜ್ಞೆ ಇತ್ತು. ಅಲ್ಲಿ ನನಗೆ ಪ್ರಾಥಮಿಕ ಚಿಕಿತ್ಸೆ ಕೊಡಿಸಿದರು. ನನ್ನ ಜೊತೆ ಹೊನ್ನಾಳಿಯ ಆಸ್ಪತ್ರೆಯಲ್ಲಿ ನನ್ನ ತಂದೆ ದೊಡ್ಡಪ್ಪ, ಮಾವ ರಂಗಪ್ಪ, ನನ್ನ ಚಿಕ್ಕಮ್ಮ ರತ್ನಮ್ಮರವರು ಇದ್ದರು. ಆ್ಯಂಬೂಲನ್ಸನಲ್ಲಿ ನರ್ಸ್ ಇದ್ದರು. ನನಗೆ ಚೂರಿಯಿಂದ ಹಲ್ಲೆ ಮಾಡಿದ್ದು ಸುಳ್ಳು ಅಂದರೆ ಸರಿಯಲ್ಲ. ನನ್ನ ಹೊಟ್ಟೆಯಲ್ಲಿ ಗಡ್ಡೆಯಾಗಿದ್ದು, ಮಣಿಪಾಲ್ ಆಸ್ಪತ್ರೆಯಲ್ಲಿ ಗಡ್ಡೆ ತೆಗೆಯಲು ಆಪರೇಷನ್ ಮಾಡಿದ್ದಾರೆ ಅಂದರೆ ಸರಿಯಲ್ಲ. ಗಡ್ಡೆ ಇರುವುದರಿಂದ ಆಗಾಗ ನನಗೆ ಹೊಟ್ಟೆ ನೋವು ಬರುತ್ತಿತ್ತು ಅಂದರೆ ಸರಿಯಲ್ಲ. ನಮಗೂ ಮತ್ತು ಆರೋಪಿತರ ನಡುವೆ ದ್ವೇಷ ಇರುವುದರಿಂದ ಈ ರೀತಿ ಸುಳ್ಳು ಪ್ರಕರಣ ದಾಖಲು ಮಾಡಿದ್ದೇವೆ ಅಂದರೆ ಸರಿಯಲ್ಲ. ಮು.ಮಾ.1 ರಿಂದ 3 ಕ್ಕೂ ಈ ಘಟನೆಗೂ ಸಂಬಂಧ ಇಲ್ಲ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.